ಬಿಂದು



# ಮರಿಯಾ ಡಾರ್ಲಿಂಗ್!

ಮರಿಯಾ ಶೆರಪೋವಾ ಎಂದರೆ ಫೋಟೊಗ್ರಾಫರುಗಳ ಅಚ್ಚುಮೆಚ್ಚು. ಇತ್ತೀಚಿನ ದಿನಗಳಲ್ಲಿ ಫೋಟೋ ಪೋಸ್ ಕೊಡೋದರಲ್ಲಿ ಸ್ಟೆಫಿ ಗ್ರಾಫ್‌ಗಳನ್ನೂ ಮೀರಿಸಿದ ಸುಂದರಿ ಈಕೆ. ಕ್ರೀಡಾಂಗಣದಲ್ಲಿ ಈಕೆಯನ್ನು ಬೆನ್ನಟ್ಟಿದಂತೆಯೇ ಹೋಟೆಲುಗಳಲ್ಲಿ, ಬೀಚುಗಳಲ್ಲಿ ಈಕೆಯನ್ನು ಬೆನ್ನಟ್ಟುವ ಫೋಟೋಗ್ರಾಫರುಗಳ ದಂಡು ಬಹಳ ದೊಡ್ಡದಿದೆ.

ಆದರೆ ಈ ರಶ್ಯನ್ ಟೆನಿಸ್ ಆಟಗಾರ್ತಿ ಅದಕ್ಕೆಲ್ಲ ತಲೆ ಕೆಡಿಸಿಕೊಂಡಿಲ್ಲ; ಅದಕ್ಕೆ ಆಕೆಗೆ ಪುರುಸೊತ್ತೂ ಇಲ್ಲ. ಟೆನಿಸ್ ಬಿಟ್ಟರೆ ಆಕೆಯೇನಿದ್ದರೂ ಜಾಹೀರಾತು ಪ್ರಪಂಚದಲ್ಲಿ ತುಂಬ ಬ್ಯುಸಿ. ಕಳೆದ 3–4 ವರ್ಷಗಳಿಂದ ಈಕೆ ಜಾಹೀರಾತುಗಳಿಂದ ಎಷ್ಟೊಂದು ಆದಾಯ ಪಡೆಯುತ್ತಿದ್ದಾಳೆಂದರೆ ಟಾಪ್ ಟೆನ್ ಪಟ್ಟಿಯಲ್ಲಿ ಪುರುಷ ಕ್ರೀಡಾಳುಗಳೊಂದಿಗೇ ಈಕೆಯ ಸ್ಪರ್ಧೆ! ವರ್ಷಕ್ಕೆ ಈಕೆಯ ಆದಾಯ 105 ಕೋಟಿ ರೂಪಾಯಿಗಳಂತೆ! ಟೆನಿಸ್ ರಂಗದಲ್ಲಿ ಅಗ್ರಮಾನ್ಯ ಆಟಗಾರ್ತಿಯಾಗಿ ಹಲವು ಗ್ರಾಂಡ್‌ಸ್ಲಾಮ್‌ಗಳನ್ನು ಗೆದ್ದಿರುವ ಸೆರಿನಾ ವಿಲಿಯಮ್ಸ್ ಕೂಡಾ ಶೆರಪೋವಾಳಷ್ಟು ಆದಾಯ ಗಳಿಸಲು ಆಗಿಲ್ಲ. ಸೆರಿನಾಳದ್ದು 95 ಕೋಟಿ ರೂಪಾಯಿ ಆದಾಯವಂತೆ! ಹಾಗಾಗಿಯೇ ಟೆನಿಸ್ ನಡೆಯದ ಹೊತ್ತಲ್ಲಿ ಎಲ್ಲ ಮ್ಯಾಗಸಿನ್‌ಗಳಲ್ಲೂ ಮರಿಯಾಳದ್ದೇ ಫೋಟೊ! ಬಹುರಾಷ್ಟ್ರೀಯ ಕಂಪೆನಿಗಳಿಗೆ ಮರಿಯಾಳೇ ಡಾರ್ಲಿಂಗ್!

## ಶೋಭಾ ಷೋ!

ಶ್ರೀಮಂತರ ಪಾರ್ಟಿಗಳಲ್ಲಿ ಸದಾ ಮಿಂಚುವ ಲೇಖಕಿ, ಅಂಕಣಕಾರ್ತಿ ಶೋಭಾ ಡೇ ಇತ್ತೀಚೆಗೆ ಫ್ಯಾಶನ್ ಷೋ ಒಂದರಲ್ಲಿ ಕ್ಯಾಟ್‌ವಾಕ್ ಮಾಡಿದ್ದು ದೊಡ್ಡ ಸುದ್ದಿ! ಬಿಡುಬೀಸಿನ ಬರಹಗಳಿಗೆ ಹಾಗೂ ಮೊನಚು ತಿವಿತಗಳಿಗೆ ಹೆಸರುವಾಸಿಯಾಗಿರುವ ಶೋಭಾಗೆ ಸ್ಟಾರ್‌ಗಳನ್ನು



ಕಾಲೆಳೆಯುವ ಕೆಲಸ ನೀರು ಕುಡಿದಷ್ಟೇ ಸಲೀಸು. ಆಕೆಯ ಪೆನ್ನಿನ ಮೊನಚಿಗೆ ಸಲ್ಮಾನ್, ಶಾರೂಕ್‌ರಂತಹ ಸ್ಟಾರ್‌ಗಳೂ, ದೆಹಲಿ ಮಟ್ಟದ ರಾಜಕಾರಣಿಗಳೂ ಏಕಕಾಲದಲ್ಲಿ ಬೆದರುತ್ತಾರೆ. ಇದೀಗ ಬೆದರುವ ಸರದಿ ಮಾಡೆಲ್‌ಗಳದ್ದು! ಫ್ಯಾಶನ್ ಡಿಸೈನರ್ ರಿತು ಬೇರಿಯ ಹೊಸ ಕಲೆಕ್ಷನ್‌ಗಳ ಪ್ರದರ್ಶನ ದೆಹಲಿಯಲ್ಲಿ ವಿಲ್ಸ್ ಲೈಫ್‌ಸ್ಟೈಲ್ ಷೋನಲ್ಲಿ ನಡೆದಾಗ ಶೋಭಾ ಡೇ ಕೂಡಾ ರ್‍ಯಾಂಪ್ ಮೇಲೆ ಹೆಜ್ಜೆ ಹಾಕಿದ್ದು, ಎಲ್ಲರ ಕಣ್ಣು ಕುಕ್ಕಿತಂತೆ. ಅದಕ್ಕೆ ಕಾರಣ ಆಯಮ್ಮನ ವಯಸ್ಸು! 62ರ ಸುಂದರಿ ಶೋಭಾ ಮಾರ್ಜಾಲ ನಡಿಗೆ ನೋಡಿ 20ರ ಹರೆಯದ ಮಾಡೆಲ್‌ಗಳೂ ಬೆರಗಾದರಂತೆ. ಅಂದ ಹಾಗೆ, ಇತ್ತೀಚೆಗಷ್ಟೆ 'ಶೋಭಾ ಅಟ್ ಸಿಕ್ಸ್‌ಟೀ' ಎಂಬ ಪುಸ್ತಕ ಬರೆದಿರುವ ಈ ಲೇಖಕಿ, ಕ್ಯಾಟ್‌ವಾಕ್ ಮಾಡಿದಾಗ ಕೈಯಲ್ಲಿ ಅದೇ ಪುಸ್ತಕ ಹಿಡಿದಿದ್ದಳಂತೆ!

## ಸ್ಪೈಡರ್ ವುಮನ್!

ಹಾಲಿವುಡ್‌ನಲ್ಲಿ ಈಗ ಎಮ್ಮಾ ಸ್ಟೋನ್‌ಳದ್ದೇ ಸುದ್ದಿ. 22ರ ಹರೆಯದ ಈಕೆ ಅಂತಹ ಸುಂದರಿಯೇನೂ ಅಲ್ಲ. 'ಡ್ರೈವ್' ಎನ್ನುವ ಟಿ.ವಿ ಷೋನಿಂದ ಹಾಲಿವುಡ್ ಸಿನಿಮಾ ಜಗತ್ತಿಗೆ ಪುಟ್ಟ ಹೆಜ್ಜೆಯಿಟ್ಟ ಈಕೆ ಇದೀಗ ಸ್ಪೈಡರ್‌ಮ್ಯಾನ್ ಚಿತ್ರದ ಹೀರೋಯಿನ್ ಪಟ್ಟ ಗಿಟ್ಟಿಸಿಕೊಂಡಿದ್ದಾಳೆ. ಇತ್ತೀಚೆಗೆ ಬಿಡುಗಡೆಯಾದ 'ಈಸಿ ಎ' ಚಿತ್ರ ಬಾಕ್ಸಾಫೀಸ್‌ನಲ್ಲಿ ಮಾತ್ರವಲ್ಲ ವಿಮರ್ಶಕರ ಪಟ್ಟಿಯಲ್ಲೂ ಜಾಗ ಪಡೆದದ್ದು ಈಕೆಯ ಅಭಿನಯದಿಂದಲೇ ಅಂತೆ. ಆರಂಭದಲ್ಲಿ ಕೆಲವು ಕಾಮಿಡಿ ಚಿತ್ರಗಳಲ್ಲಿ ಮಾತ್ರ ನಟಿಸಿದ್ದ ಈಕೆ ಬಳಿಕ ಹಾರರ್‌ಗೂ ಕಾಲಿಟ್ಟಳು. ಇದೀಗ ಆ್ಯಂಡ್ರೂ ಗ್ಯಾರ್‌ಫೀಲ್ಡ್‌ನಂತಹ ಸ್ಟಾರ್ ನಟನ ಜತೆ ಹೆಗಲೆಣೆಯಾಗಿ ನಟಿಸುತ್ತಿದ್ದಾಳೆ. ಎಮ್ಮಾ ಸ್ಟೋನ್ ಖ್ಯಾತಿ ಎಷ್ಟಿದೆಯೆಂದರೆ, ತನ್ನ ಅಮ್ಮನ ಕ್ಯಾನ್ಸರ್ ಗುಣವಾದ ಸಂಭ್ರಮವನ್ನು ಆಚರಿಸಲು ಮೈಮೇಲೆ ಹಚ್ಚೆ ಹಾಕಬೇಕೆಂದು ಈಕೆ ಬಯಸಿದಾಗ, ಮ್ಯೂಸಿಕ್ ಲೋಕದ ಸೂಪರ್‌ಸ್ಟಾರ್ ಪಾಲ್ ಮೆಕಾರ್ಟ್ನಿಯೇ ಈಕೆಯ ಕರೆಗೆ ಓಗೊಟ್ಟು ಬಂದನಂತೆ!



Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65